3. ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದ ವತಿಯಿಂದ 617 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ.

4. ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ 47 ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಮತ್ತು 2 ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಇಲಾಖಾ ಅನುದಾನವನ್ನು ಒದಗಿಸಲಾಗಿದೆ.

## ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ ನಬಾರ್ಡ್‌ನಿಂದ ಮಂಜೂರಾಗಿರುವ ಹಣ

1431 (1788) - ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ನಬಾರ್ಡ್‌ನಿಂದ ಭೂ ಅಭಿವೃದ್ಧಿ ಬ್ಯಾಂಕ್ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್‌ಗೆ ಎಷ್ಟು ಹಣ ಬಿಡುಗಡೆಯಾಗಿದೆ. (ವರ್ಷವಾರು ಮಾಹಿತಿ ನೀಡುವುದು)

2. ಇದರಲ್ಲಿ ಬೆಂಗಳೂರು ಜಿಲ್ಲೆಗೆ ಎಷ್ಟು ಹಣ ಒದಗಿಸಲಾಗಿದೆ. ವ್ಯವಸಾಯ ಮತ್ತು ವ್ಯವಸಾಯೇತರ ಅಭಿವೃದ್ಧಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ.

3. ವ್ಯವಸಾಯಕ್ಕೆ ಒದಗಿಸಿರುವ ಹಣದಲ್ಲಿ ರೈತರಿಗೆ ವಿತರಣೆಯಾಗಿರುವ ಅಲ್ಪಾವಧಿ ಸಾಲ ಹಾಗೂ ಮಧ್ಯಮಾವಧಿ ಸಾಲಕ್ಕಾಗಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು)

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1. ಕಳೆದ 3 ವರ್ಷಗಳಲ್ಲಿ ನಬಾರ್ಡ್‌ನಿಂದ ಭೂ ಅಭಿವೃದ್ಧಿ ಬ್ಯಾಂಕಿಗೆ (ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ಮತ್ತು ಅಪೆಕ್ಸ್ ಬ್ಯಾಂಕಿಗೆ ಬಿಡುಗಡೆಯಾಗಿರು ಹಣದ ವಿವರ ಈ ಕೆಳಕಂಡಂತಿವೆ (ರೂ. ಕೋಟಿಗಳಲ್ಲಿ)

| | | ಕಾಸ್ಕಾರ್ಡ್ ಬ್ಯಾಂಕ್ | ಅಪೆಕ್ಸ್ ಬ್ಯಾಂಕ್ |
|---|---|---|---|
| 1. | 1998-99 | 119.07 | 559.08 |
| 2. | 1999-00 | 125.89 | 584.22 |
| 3. | 2000-01 | 125.12 | 652.31 |

2. ಬೆಂಗಳೂರು ಜಿಲ್ಲೆಗೆ ಕಾಸ್ಕಾರ್ಡ್ ಬ್ಯಾಂಕಿನಿಂದ ಬಿಡುಗಡೆ ಮಾಡಿರುವ ಹಣದ ವಿವರ ಈ ಕೆಳಕಂಡಂತಿವೆ (ರೂ. ಕೋಟಿಗಳಲ್ಲಿ)

| ವರ್ಷ | ಒಟ್ಟು ಮೊತ್ತ | ವ್ಯವಸಾಯ ಉದ್ದೇಶ | ವ್ಯವಸಾಯೇತರ ಉದ್ದೇಶ |
|---|---|---|---|
| 1999-2000 | 17.54 | 13.00 | 3.94 |
| 2000-2001 | 14.42 | 11.10 | 3.32 |
| 2001-2002 (28-2-2002 ಕ್ಕೆ ಇದ್ದಂತೆ) | 10.01 | 8.27 | 1.74 |

ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಬಿ.ಆರ್.ಆಕ್ಟ್ 1949 ಕಲಂ 11(1)ರ ಪಾಲನೆ ಮಾಡದಿರುವುದರಿಂದ ನಬಾರ್ಡಿನಿಂದ ಪುನರ್ಧನ ಸೌಲಭ್ಯ ಲಭ್ಯವಿರುವುದಿಲ್ಲ. ಅಪೆಕ್ಸ್ ಬ್ಯಾಂಕ್ ಸ್ವಂತ ನಿಧಿಯಿಂದ ಸಾಲ ನೀಡಿರುತ್ತದೆ.

3. ಅ) ಕಾಸ್ಕಾರ್ಡ್ ಬ್ಯಾಂಕ್, ನಬಾರ್ಡ್‌ನ ಪುನರ್ಧನ ಯೋಜನೆಯಿಂದ ಅಲ್ಪಾವಧಿ ಅಥವಾ ಮಧ್ಯಮಾವಧಿ ಸಾಲವನ್ನು ನೀಡಿರುವುದಿಲ್ಲ.

ಆ) ಕಳೆದ 3 ವರ್ಷಗಳಲ್ಲಿ ವ್ಯವಸಾಯಕ್ಕೆ ಒದಗಿಸಿರುವ ಹಣದಲ್ಲಿ ಅಲ್ಪಾವಧಿ ಸಾಲಕ್ಕಾಗಿ ಹಾಗೂ ಮಧ್ಯಮಾವಧಿ ಸಾಲಕ್ಕಾಗಿ ಬಿಡುಗಡೆ ಮಾಡಲಾಗಿರುವ ವಿವರಗಳು ಕೆಳಕಂಡಂತಿವೆ.

(ರೂ. ಕೋಟಿಗಳಲ್ಲಿ)

| | ಅಲ್ಪಾವಧಿ | ಮಧ್ಯಮಾವಧಿ |
|---|---|---|
| 1998-1999 | ರೂ. 466.57 | 92.51 |
| 1999-2000 | ರೂ. 486.85 | 97.37 |
| 2000-2001 | ರೂ. 540.41 | 111.90 |

## ನೀರಾ ಇಳಿಸುವುದಕ್ಕೆ ಅನುಮತಿ

1432 (1720) - ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ತೆಂಗಿನ ಮರಗಳಿಗೆ ನುಸಿರೋಗ ಹರಡಿದೆ.

ಆ. ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಈ ರೋಗ ಕಾಣಿಸಿಕೊಂಡಿದೆ? (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಇ. ತೆಂಗಿನ ಮರಗಳಿಗೆ ಹರಡಿರುವ ನುಸಿರೋಗವನ್ನು ತಡೆಗಟ್ಟುವ ಬಗ್ಗೆ ಇದುವರೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ಮಾಡಲಾಗಿರುವ ವೆಚ್ಚ ಎಷ್ಟು?

ಈ. ನುಸಿರೋಗದ ಹಾವಳಿಯಿಂದ ತೆಂಗಿನ ಫಸಲು ಕ್ಷೀಣಿಸಿರುವುದರಿಂದ ರೈತರುಗಳಿಗೆ ಅನುಕೂಲ ಮಾಡಿಕೊಡಲು ನೀರಾ ಇಳಿಸುವುದಕ್ಕೆ ಅನುಮತಿ ಕೊಡಲು ಸರ್ಕಾರ ಪರಿಶೀಲನೆ ಮಾಡುವುದೇ?